# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **860** |
| ವಿಧಾನ ಪರಿಷತ್ತು ಸದಸ್ಯರ ಹೆಸರು | : ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : **15.12.2025** |
| ಉತ್ತರಿಸುವ ಸಚಿವರು | : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕರ್ನಾಟಕ ರಾಜ್ಯವನ್ನು ಹಸಿವು ಮುಕ್ತ ಮಾಡಲು ಸನ್ಮಾನ್ಯ ಮುಖ್ಯಮಂತ್ರಿಗಳು ಕೈಗೊಂಡಿರುವ ಅನ್ನಭಾಗ್ಯ ಯೋಜನೆ ವಿಶ್ವದಲ್ಲಡೆ ಪ್ರಶಂಸೆಗೆ ಪಾತ್ರವಾಗಿದ್ದು ಈ ಯೋಜನೆಯಡಿ ಸರ್ಕಾರ ರಾಜ್ಯದ ಬಡ ಕುಟುಂಬಗಳಿಗೆ ಎಷ್ಟು ಕೆ.ಜಿ. ಅಕ್ಕಿ ಬದಲಾಗಿ "ಇಂದಿರಾ ಫುಡ್ ಕಿಟ್" ವಿತರಿಸಲು ಯೋಚಿಸಿದ್ದು ಸದರಿ ಯೋಜನೆಗೆ ಖರ್ಚಾಗುವ ಅಂದಾಜು ಬಾಬ್ತು ಎಷ್ಟು;</td><td>ಸರ್ಕಾರದ ಆದೇಶ ಸಂಖ್ಯೆ: ಇ-ಅನಾಸ 158 ಡಿಆರ್‌ಎ 2025 ಭಾ-2 ದಿನಾಂಕ: 18-11-2025 ರಲ್ಲಿ ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ 05 ಕೆ.ಜಿ ಅಕ್ಕಿ ಬದಲಾಗಿ ಪ್ರತಿ ಪಡಿತರ ಚೀಟಿಗೆ ತೊಗರಿ ಬೇಳೆ, ಅಡುಗೆ ಎಣ್ಣೆ, ಸಕ್ಕರೆ, ಉಪ್ಪು ಒಳಗೊಂಡ ಇಂದಿರಾ ಆಹಾರ ಕಿಟ್(ಪೌಷ್ಠಿಕಾಂಶ ಕಿಟ್)ನ್ನು ಪಡಿತರ ಫಲಾನುಭವಿಗಳಿಗೆ ವಿತರಿಸಲು ತೀರ್ಮಾನಿಸಲಾಗಿರುತ್ತದೆ.<br><br>ರಾಜ್ಯದಲ್ಲಿರುವ ಫಲಾನುಭವಿಗಳನ್ನು ಅವರ ಸಂಖ್ಯೆಗೆ ಅನುಗುಣವಾಗಿ ಮೂರು ಭಾಗಗಳಾಗಿ ವಿಭಜಿಸಿ ಸರ್ಕಾರವು ಹಂಚಿಕೆ ಮಾಡುವ ಇಂದಿರಾ ಆಹಾರ ಕಿಟ್ ಪ್ರಮಾಣವನ್ನು ಕೆಳಕಂಡ ಕೋಷ್ಠಕದಂತೆ ನಿಗದಿ ಪಡಿಸಲಾಗಿರುತ್ತದೆ.
<table>
<tr><th>ಕ್ರ.ಸಂ</th><th>ಪಡಿತರ ಚೀಟಿದಾರರ ಸಂಖ್ಯೆ</th><th>ಆಹಾರ ಕಿಟ್‌ನಲ್ಲಿ ವಿತರಿಸಬೇಕಾದ ಒಟ್ಟು ಪ್ರಮಾಣ</th></tr>
<tr><td>1</td><td>01 ಹಾಗೂ 02 ಸದಸ್ಯರು</td><td>1)ತೊಗರಿ ಬೇಳೆ $\frac{3}{4}$ (750gm)<br>2) ಅಡುಗೆ ಎಣ್ಣೆ $\frac{1}{2}$ ಲೀಟರ್ (500 ml)<br>3)ಸಕ್ಕರೆ $\frac{1}{2}$ ಕೆ.ಜಿ (500gm)<br>4)ಉಪ್ಪು 1 ಕೆ.ಜಿ (500gm)</td></tr>
<tr><td>2</td><td>03 ಹಾಗೂ 04 ಸದಸ್ಯರು</td><td>1)ತೊಗರಿ ಬೇಳೆ 1 $\frac{1}{2}$ ಕೆ.ಜಿ. (1500gm)<br>2) ಅಡುಗೆ ಎಣ್ಣೆ 1 ಲೀಟರ್ (1000 ml)<br>3)ಸಕ್ಕರೆ 1 ಕೆ.ಜಿ</td></tr>
</table>
</td></tr>
</table>

| | | |
|---|---|---|
| | | <table><tr><td></td><td></td><td>(1000gm)<br>4)ಉಪ್ಪು 1 ಕೆ.ಜಿ (1000gm)</td></tr><tr><td>3</td><td>05 ಹಾಗೂ ಅದಕ್ಕಿಂತ ಹೆಚ್ಚಿನ ಸದಸ್ಯರು</td><td>1)ತೊಗರಿ ಬೇಳೆ 2 ¼ ಕೆ.ಜಿ. (2250 gm)<br>2) ಅಡುಗೆ ಎಣ್ಣೆ 1 ½ ಲೀಟರ್ (1500 ml)<br>3) ಸಕ್ಕರೆ 1 ½ ಕೆ.ಜಿ (1500gm)<br>4)ಉಪ್ಪು 1 ½ ಕೆ.ಜಿ (1500gm)</td></tr></table>ಇದಕ್ಕೆ ಪ್ರತಿ ಮಾಹೆ ಅಂದಾಜು **509.96** ಕೋಟಿಗಳ ವೆಚ್ಚವಾಗಲಿದೆ. |
| ಆ | ಸದರಿ ಯೋಜನೆಯಡಿ ("ಇಂದಿರಾ ಫುಡ್ ಕಿಟ್") ರಾಜ್ಯದಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ; ಎಷ್ಟು ಫಲಾನುಭವಿಗಳಿಗೆ ಆಹಾರ ಕಿಟ್‌ಯನ್ನು ವಿತರಿಸಲಾಗಿದೆ; ಮತ್ತು ಎಷ್ಟು ಫಲಾನುಭವಿಗಳಿಗೆ ವಿತರಣೆ ಬಾಕಿ ಇದೆ; (ಮಾಹೆಯಾನವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಅರ್ಹ ಪಡಿತರಚೀಟಿಗಳಲ್ಲಿರುವ ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಮೂರು ಭಾಗಗಳಾಗಿ ವಿಭಜಿಸಿ ಆಹಾರ ಕಿಟ್‌ಗಳನ್ನು ಹಂಚಿಕೆ ಮಾಡಬೇಕಾಗಿರುತ್ತದೆ. ಆಹಾರ ಕಿಟ್‌ಗಳನ್ನು ವಿತರಣೆ ಮಾಡುವ ಕುರಿತು ಟೆಂಡರ್ ಪ್ರಕ್ರಿಯೆ ಮತ್ತು ಇತರೆ ಸಿದ್ಧತೆಗಳನ್ನು ಮಾಡಿಕೊಳ್ಳುವ ಕುರಿತು ಕ್ರಮವಹಿಸಲಾಗುತ್ತಿದೆ. ತದನಂತರ ಪಡಿತರ ಫಲಾನುಭವಿಗಳಿಗೆ ಆಹಾರ ಕಿಟ್‌ಗಳನ್ನು ಸಾರ್ವಜನಿಕ ವಿತರಣಾ ಪದ್ಧತಿಯಡಿ ವಿತರಣೆ ಮಾಡಲಾಗುವುದು. |
| ಇ | ಸದರಿ ಕಿಟ್‌ನಲ್ಲಿ ಯಾವ ಯಾವ ಧಾನ್ಯಗಳನ್ನು ಒದಗಿಸಲಾಗುತ್ತಿದೆ? (ಮಾಹಿತಿ ನೀಡುವುದು) | ತೊಗರಿ ಬೇಳೆ, ಅಡುಗೆ ಎಣ್ಣೆ, ಸಕ್ಕರೆ ಮತ್ತು ಉಪ್ಪು ಒಳಗೊಂಡಂತೆ ಆಹಾರ ಕಿಟ್‌ಗಳನ್ನು ವಿತರಣೆ ಮಾಡಲಾಗುವುದು. |

ಇ-ಆನಾಸ **339** ಡಿಆರ್ಎ **2025**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು